ಇಲ್ಲದಿದ್ದುದು ಎಂದು ಜನರಾಡಿಕೊಳ್ಳುತ್ತಿದ್ದರು. ಆತ ತಾನಾಯಿತು ತನ್ನ ಕೆಲಸವಾಯಿತು ಎಂಬಂತಿದ್ದ. ಆತನೊಡನೆ ಈ ಒಂಟಿ ಮನುಷ್ಯನ ಸಂವಹನ ಹೇಗೆ ನಡೆಯುತ್ತಿತ್ತು ಎಂಬ ಬಗ್ಗೆ ಊರ ಜನರಿಗೆ ಗೊತ್ತಿರಲಿಲ್ಲ. ಆತ ಮೂಕ ಎಂಬುದರಲ್ಲಿ ಸಂದೇಹವಿಲ್ಲ ಎಂದು ಹಲವರು ನಂಬಿದ್ದರು. ಬಹಳ ಗಂಭೀರವಾಗಿರುವ ಆ ಮನುಷ್ಯನ ಬಳಿಗೆ ಹೋಗಿ ಮಾತಾಡಿಸುವ ಧೈರ್ಯ ಜನರಿಗಿರಲಿಲ್ಲ. ಮನೆ ಕಟ್ಟುವ ಕೆಲಸದಲ್ಲಿದ್ದ ಇಂಜಿನಿಯರೊಡನೆ ಆತ ಮೂಕ ಭಾಷೆಯಲ್ಲಿ ಮಾತಾಡುತ್ತಿದ್ದ ಎಂದು ಕೆಲವರೆಂದರೆ, ಯಾವತ್ತೋ ಒಂದೆರಡು ಶಬ್ದ ಇಂಗ್ಲಿಷಿನಲ್ಲಿ ಅಥವಾ ಊರ ಮಂದಿಗೆ ತೀರಾ ಅಪರಿಚಿತವಾದ ಯಾವುದೋ ಇನ್ನೊಂದು ಭಾಷೆಯಲ್ಲಿ ಕೆಲವು ಶಬ್ದಗಳನ್ನು ಆಡುತ್ತಿದ್ದ ಎಂದು ಮನೆ ಕಟ್ಟುವ ಕೆಲಸಗಾರರು ಹೇಳುತ್ತಿದ್ದರು. ಆತ ಮಾತಾಡುತ್ತಿದ್ದುದೆಂದರೆ ಅಷ್ಟೆ, ಬೇರೆ ಏನೂ ಮಾತಾಡುತ್ತಿರಲಿಲ್ಲ, ಪಟ್ಟಣಕ್ಕೆ ಬಂದು ಮನೆವಾರ್ತೆಗೆ ಅಗತ್ಯವಿರುವ ವಸ್ತುಗಳನ್ನು ಖರೀದಿಸಲು ಅಂಗಡಿಯಲ್ಲಿ ಒಂದು ಚೀಟಿ ಕೊಡುತ್ತಿದ್ದ. ಅದು ಇಂಗ್ಲಿಷಿನಲ್ಲಿರುತ್ತಿತ್ತು. ಕೆಲವೇ ಕೆಲವು ಬಾರಿ ಬಹಳ ಮೃದುವಾಗಿ ಇಂಗ್ಲಿಷಿನಲ್ಲಿ ಒಂದೆರಡು ಶಬ್ದಗಳನ್ನು ಆಡುತ್ತಿದ್ದ. ಅಷ್ಟೇ ಅಲ್ಲ, ಆತ ಯಾರ ಮುಖವನ್ನೂ ನೋಡುವುದಿಲ್ಲ ಎಂದ ಜನ ಹೇಳುತ್ತಿದ್ದರು. ನಿಜ, ತನಗೆ ಇನ್ನೊಬ್ಬರ ಮುಖ ನೋಡಬೇಕಾದ ಅಗತ್ಯವೇ ಇಲ್ಲ ಎಂಬಂತೆ ಆತನಿದ್ದ.

ಆತನ ವಯಸ್ಸು ಸುಮಾರು ಐವತ್ತುಐವತ್ತೈದು ಎಂದು ಜನ ಊಹಿಸುತ್ತಿದ್ದರು. ವಯಸ್ಸು ಅಷ್ಟಾದರೂ ಮೂವತ್ತು ವರ್ಷದ ತರುಣನಂತಿದ್ದಾನೆ, ರೂಪವಂತನಾಗಿದ್ದಾನೆ ಎಂದು ಕೂಡ ಜನರು ಆಡಿಕೊಳ್ಳುತ್ತಿದ್ದರು. ಏನಾದರೂ ನೆಪ ಮಾಡಿ ಮಾತಾಡಬೇಕು ಎಂದನಿಸಿದವರಿಗೂ ಆರು ಅಡಿ ಎತ್ತರದ ಸುದೃಢ ಕಾಯದ ನರಹರಿಯ ಗಂಭೀರ ಮುಖಭಾವ ಮತ್ತು ನಿರ್ಲಿಪ್ತ ನಿರಾಸಕ್ತ ನೋಟವನ್ನು ಗಮನಿಸಿ ಯಾಕಾದರೂ ಆತನೊಡನೆ ಮಾತಾಡಬೇಕು ಎಂದುಕೊಂಡವರೂ ಇದ್ದರು. ಆದರೂ ಊರಿಗೆ ಒಬ್ಬ ಹೊಸ ವ್ಯಕ್ತಿಯ ಪ್ರವೇಶ ಆಗಿದೆಯೆಂದರೆ ಆತ ಯಾರು, ಎಲ್ಲಿಂದ ಬಂದ, ಅವನಿಗೆ ಹೆಂಡತಿ ಮಕ್ಕಳು ಇಲ್ಲವೆ, ಇದ್ದರೆ ಎಲ್ಲಿದ್ದಾರೆ, ಇವನು ಯಾಕೆ ಇಲ್ಲಿ ಒಬ್ಬನೇ ಇದ್ದಾನೆ, ಯಾಕೆ ಇಷ್ಟು ದೊಡ್ಡ ಮಹಡಿ ಮನೆ ಕಟ್ಟಿಸುತ್ತಿದ್ದಾನೆ, ಇದರಲ್ಲಿ ವಾಸ ಮಾಡುವವರು ಯಾರು ಎಂಬ ಪ್ರಶ್ನೆ ಕೆಲವರದಾದರೆ, ಅಮೆರಿಕೆಯಿಂದ ಒಂದು ಗೋಣಿ ಹಣ ತಂದಿದ್ದಾನೆ, ಎಲ್ಲವನ್ನೂ ಮನೆ ಕಟ್ಟಲು ಸುರಿದಿದ್ದಾನೆ ಎಂಬ ಉತ್ತರ ಇತರರಲ್ಲಿತ್ತು. ನಿಧಾನವಾಗಿ, ಜನರು ತಾವು ಕಂಡ ಸಂಗತಿಗಳಿಗಿಂತ ಹೆಚ್ಚು ಕಾಣದ ಸಂಗತಿಗಳನ್ನೇ ಜೋಡಿಸಿಕೊಂಡು ಆತನ ಕುರಿತು ಕತೆ ಹೆಣೆದರು.

ಆತನ ಹೆಸರು ನರಹರಿ ಎಂಬುದು ಹೇಗೋ ಜನರಿಗೆ ತಿಳಿಯಿತು. ಕಥೆ ಹೆಣೆಯಲು ಜನರಿಗೆ ಕಥಾನಾಯಕ ಬೇಕೇ ಬೇಕು. ಕಥಾನಾಯಕ ಸಿಕ್ಕ ಮೇಲೆ ನಿಜವಾಗಿ ಸಿಕ್ಕಿದ ಮಾಹಿತಿಗೆ ಯಥೇಚ್ಛ ಕಲ್ಪನೆಗಳನ್ನು ಸೇರಿಸುವುದು ಸುಲಭ. ಕಲ್ಪನೆಯ ಜೊತೆ ಅವರಿಗೆ ನರಹರಿಯ ಮನೆ ನಿರ್ಮಾಣದ ಕೆಲಸ ಪೂರ್ಣವಾದ ಮೇಲೆ ಕಟ್ಟಡದ ಕೆಲಸಗಾರರಿಂದ ಸಿಕ್ಕಿದ ಚೂರುಪಾರು ಮಾಹಿತಿಯಿಂದ ಒಂದು ಕತೆ ನಿರ್ಮಾಣವಾಯಿತು. ಬದುಕಿಗೆ ಸಂಬಂಧಿಸಿದ ಆತನ ಚಲನವಲನವನ್ನು ಒಂದಷ್ಟು ಕಾಲ ಕಂಡ ನಂತರ ಜನರು ತಮ್ಮ ಕಲ್ಪನೆಯ ಕತೆಗೆ ಕೆಲವು ನಿಜಗಳನ್ನು ಜೋಡಿಸಿದರು. ಒಂದು ಊರಿಗೆ ಒಬ್ಬ ಹೊಸ ವ್ಯಕ್ತಿ ಅಥವಾ ಒಂದು ಹೊಸ ಕುಟುಂಬದ ಪ್ರವೇಶವಾದರೆ ಜನರ ದೃಷ್ಟಿ ಮತ್ತು ನಾಲಿಗೆ ಈ ಪ್ರಪಂಚದಲ್ಲಿ ಹೀಗಲ್ಲದೆ ಬೇರೆ ಯಾವ ರೀತಿ ಸಕ್ರಿಯವಾಗಲು ಸಾಧ್ಯ? ಕತೆ ಬೆಳೆದೇ ಬೆಳೆಯಿತು. ಆ ಬೆಳವಣಿಗೆಗೆ ಜನರಿಗೆ ಸಿಕ್ಕಿದ ಒಂದೇ ಒಂದು ಎಳೆಯೆಂದರೆ ಆತ ಅಮೆರಿಕೆಯಲ್ಲಿದ್ದ ಎಂಬುದಾಗಿತ್ತು. ಆದರೆ ಆನೆಮಹಲಿಗೆ ತಿಳಿಯದ ನಿಜ ಕತೆ ಬೇರೆಯೇ ಇತ್ತು. ಅದನ್ನು ನರಹರಿಯ ಬದುಕಿನ ಕುರಿತು ಬಹುತೇಕ ಎಲ್ಲವನ್ನೂ ತಿಳಿದಿರುವ ಲೇಖಕನ ಹೊರತು ಬೇರೆ ಯಾರಿಂದ ತಾನೇ ಹೇಳಲು ಸಾಧ್ಯ?

ನಿಜವಾಗಿಯೂ ನರಹರಿ ಅಪಾರ ದೈವಭಕ್ತ. ಆದರೆ ಆ ಭಕ್ತಿ ಆತನ ಅಂತರ್ಯದಲ್ಲಿ ಇತ್ತೇ ವಿನಾ ಯಾವತ್ತೂ ದೇವಾಲಯಗಳ ಸಂದರ್ಶನ, ಪೂಜೆ, ಹರಕೆ, ತೀರ್ಥಯಾತ್ರೆಗಳ ಮೂಲಕ ಲೋಕದ ಕಣ್ಣಿಗೆ ಕಾಣಿಸುವಂಥದಾಗಿರಲಿಲ್ಲ. ಅವರ ಮನೆಯಲ್ಲಾಗಲಿ, ಅಮೆರಿಕೆಯ ಅವರ ಮನೆಯಲ್ಲಾಗಲಿ ದೇವರ ಕೋಣೆ, ದೇವರ ಪಟ ಮುಂತಾದವು ಇರಲಿಲ್ಲ. ಹೋಮ ಹವನ ಯಜ್ಞ ಇತ್ಯಾದಿಗಳನ್ನು ಮಾಡದೆ, ಶ್ರಾದ್ಧಾದಿ ವಿಧಿಗಳನ್ನು ಮಾಡದೆ ಇತರರ ದೃಷ್ಟಿಯಲ್ಲಿ ಜಿಪುಣ, ನಾಸ್ತಿಕ, ಬ್ರಾಹ್ಮಣನಾಗಿ ಹುಟ್ಟಿದ್ದೂ ಯಜ್ಞೋಪವೀತ ಹಾಕಿಕೊಳ್ಳದಿರುವ ಅಪರೂಪದ ವ್ಯಕ್ತಿಯಾದ ಕುಬ್ರಾಹ್ಮಣ, ಪಾಖಂಡಿ ಎನಿಸಿಕೊಂಡಿದ್ದ. ನರಹರಿ ಮೀನು ಮಾಂಸ ತಿನ್ನುತ್ತಾನೆ ಎಂದು ಕೂಡ ಜನರಾಡಿಕೊಳ್ಳುತ್ತಿದ್ದರು. ಇತರರು ಆಡಿದ ಮಾತು ನರಹರಿಯ ಶ್ರವಣೇಂದ್ರಿಯವನ್ನು ಪ್ರವೇಶಿಸಿದ ಯಾವ ಲಕ್ಷಣವೂ ಜನರಿಗೆ ಕಾಣಿಸಲಿಲ್ಲ. ಜಾತಿಗೆ ಸಂಬಂಧಿಸಿದ, ಅಥವಾ ದೈವಭಕ್ತಿಗೆ ಸಂಬಂಧಿಸಿದ ಯಾವ ಮಾತೂ ಆಡದ, ಯಾವ ವಾದ ವಿವಾದ, ಚರ್ಚೆಯಲ್ಲಿ ಪಾಲುಗೊಳ್ಳದ ನರಹರಿ ಬಹುತೇಕ ಮೌನವಾಗಿಯೇ ಇರುವ ಮನುಷ್ಯನಾಗಿ ಜನರಿಂದ ಮೂಕ ಎನಿಸಿಕೊಂಡದ್ದೂ ಇತ್ತು. ಅಮೆರಿಕೆಯ ತನ್ನ ಉದ್ಯೋಗ, ಸಂಪಾದನೆ, ಬದುಕು ಇತ್ಯಾದಿಗಳ ಬಗ್ಗೆ ಯಾರೊಡನೆಯೂ ಮಾತಾಡಿದವನಲ್ಲ ನರಹರಿ. ಜನರನ್ನು ದೂರವಿಡಲು ಆತ ಸದಾ ಅತಿ ಗಂಭೀರ ಮುಖದವನಾಗಿ ಇರುತ್ತಾನೆ ಎಂದು ಕೆಲವರು ಹೇಳುತ್ತಿದ್ದರು. ದಾರಿಯಲ್ಲಿ ಸಿಕ್ಕ ಯಾರ ಮುಖವನ್ನೂ ಆತ ನೋಡುತ್ತಿರಲಿಲ್ಲ, ಯಾರ ಬಳಿಯೂ ಮಾತಾಡುತ್ತಿರಲಿಲ್ಲ. ಈ ರೀತಿ ಕೂಡ ಸಮಾಜದಲ್ಲಿ ಬದುಕಲು ಸಾಧ್ಯವೆ ಎಂಬ ಜನರ ಅಚ್ಚರಿಗೆ 'ಸಾಧ್ಯ' ಎಂಬ ಉತ್ತರವಾಗಿದ್ದ ನರಹರಿ. ಆತ ಎಂಥ ಮನುಷ್ಯ ಎಂದು ನಿಜವಾಗಿ ತಿಳಿದುಕೊಳ್ಳಲು ಅಥವಾ ಅರ್ಥ ಮಾಡಿಕೊಳ್ಳಲು ಯಾರಿಂದಲೂ ಸಾಧ್ಯವಾಗಲಿಲ್ಲ ಎಂದರೆ ಉತ್ಪ್ರೇಕ್ಷೆಯಲ್ಲ. ನರಹರಿ ಇಂಥ ಮನುಷ್ಯನಾಗಿರಲು ಏನೋ ಕಾರಣವಿದೆ ಎಂಬ ಮಾತು ಮತ್ತು ಕತೆಗಳು ಕೊನೆಯಿಲ್ಲದೆ ಕೊನರುತ್ತಲೇ ಇದ್ದವು. 'ನಿಗೂಢ ಮಾನವ' ಮಹಾ ಜಿಪುಣ, ಅಹಂಕಾರ, ಅಜ್ಞಾನಿ ಮುಂತಾಗಿ ಜನರು ಆತನಿಗೆ ಹಲವು ಉಪಾಧಿಗಳನ್ನು ಜೋಡಿಸಿದ್ದರು. ಮಾನವ ಪ್ರಪಂಚ ಯಾವುದೇ ಉಪಾಧಿಯನ್ನು ಜೋಡಿಸಿದರೂ ಅದು ಕೆಟ್ಟ ಶಬ್ದವಾಗಿರುತ್ತದೆಯೇ ಹೊರತು ಯಾವತ್ತೂ ಒಳ್ಳೆಯ ಶಬ್ದವಾಗಿರುವುದಿಲ್ಲ ಎಂಬುದು ಸಾರ್ವಕಾಲಿಕ ಸತ್ಯ. ಅದು ಏನೇ ಆಗಿದ್ದರೂ ಶಬ್ದವನ್ನು ನಿಶ್ಶಬ್ದವೆಂದೇ ಪರಿಭಾವಿಸುವ ನರಹರಿಯ ಯಾವ ಶಬ್ದವೂ ತಮ್ಮ ಕಿವಿಗೆ ತಲುಪಿದಂತೆ ಜನರಿಗೆ ತೋರಲಿಲ್ಲ. ವಾಸ್ತವದಲ್ಲಿ, ಅವ್ಯಾವುವೂ ಕಿವಿಯೊಳಗೆ ನುಸುಳದಂಥ ವಿಶೇಷವಾದ ಶ್ರವಣೇಂದ್ರಿಯ ಆತನದಾಗಿತ್ತು. ಭೂಮಿಯ ಮೇಲೆ 'ಇಂಥ ಮನುಷ್ಯನೊಬ್ಬನಿರಲು ಸಾಧ್ಯವೆ?' ಎಂದು ಒಬ್ಬರಿನ್ನೊಬ್ಬರೊಡನೆ ಹೇಳುವುದು ಕೇಳುವುದು ನಡೆಯುತ್ತಲೇ ಇತ್ತು. ಕುಚೇಷ್ಟೆಯ ಮಾತಿಗಂತೂ ಲೆಕ್ಕವಿರಲಿಲ್ಲ. ಆತ ಅಮೆರಿಕೆಯಲ್ಲಿ ಏನು ಉದ್ಯೋಗ ಮಾಡುತ್ತಿದ್ದ ಎಂದು ಯಾರಿಗೂ ಗೊತ್ತಿರಲಿಲ್ಲ. ದಂತವೈದ್ಯನಾಗಿದ್ದ ಎಂದು ಯಾರೋ ಒಬ್ಬ ಹೇಳಿದ್ದನ್ನೇ ಬಹಳ ಮಂದಿ ನಂಬಿದ್ದರು. ಆತ ತನ್ನ ಬಳಿ ಬಂದವರೊಂದಿಗೆ ಅವರ ಹಲ್ಲಿನ ಸಮಸ್ಯೆಯ ಬಗ್ಗೆ ಕೇಳುತ್ತಿದ್ದನೆ ಅಥವಾ ನೇರವಾಗಿ ಹಲ್ಲು ಕಿತ್ತುಹಾಕುತ್ತಿದ್ದನೆ ಎಂದು ಮುಂತಾಗಿ ಜನ ಆಡಿಕೊಳ್ಳುತ್ತಿದ್ದರು. ಸದಾ ಕಾಲ ಏನಾದರೊಂದು ತಮಾಷೆಯ ಮಾತನ್ನು ಆಡಲು ಮತ್ತು ಆಲಿಸಲು ಉತ್ಸುಕತೆಯಿಂದಿರುವ ಅವಿಶ್ರಾಂತವಾದ, ಬಳಲಿಕೆಯಿಲ್ಲದ ಮಾನವ ನಾಲಿಗೆಗೆ ಮತ್ತು ಕಿವಿಗೆ ನರಹರಿ ಒಳ್ಳೆಯ ಆಹಾರವಾಗಿದ್ದ.

ಅಮೆರಿಕೆಯಿಂದ ನರಹರಿ ಭಾರತಕ್ಕೆ ಬಂದ ಬಗ್ಗೆ ಬಗೆ ಬಗೆಯ ಕತೆಗಳನ್ನು ಜನರು ಹೆಣೆಯುತ್ತಲೇ ಇದ್ದರು. ಅದೆಲ್ಲವನ್ನೂ ಕ್ರೋಢೀಕರಿಸಿದರೆ ಅದು ಒಂದು ಆಧುನಿಕ ಪುರಾಣವೇ ಆಗಬಹುದಿತ್ತು.

ಆತ ಭಾರತಕ್ಕೆ ಬಂದ ನಂತರದ ಹದಿನೈದು ವರ್ಷಗಳಲ್ಲಿ ಒಟ್ಟು ಐದು ವಾಕ್ಯಗಳನ್ನು ಮಾತ್ರ ಆಡಿದ್ದಾನೆ ಎಂದು ಒಬ್ಬನೆಂದರೆ, ಆತ ಮಾತೇ ಆಡಿಲ್ಲ ಎಂದು ಇನ್ನೊಬ್ಬ ಹೇಳುತ್ತಿದ್ದ. ಮಾತೇ ಆಡದೆ, ಆನೆ, ಕುದುರೆ, ಕುರಿ, ಆಡು ಹಸು ಮುಂತಾವುಗಳಂತೆ ಬದುಕಲು ಸಾಧ್ಯ ಎಂಬುದಕ್ಕೆ ಇರುವ ಒಂದೇ ಒಂದು ಉದಾಹರಣೆಯೆಂದರೆ ಆತ ಎಂದು ಕೆಲವರು ಹೇಳುತ್ತಿದರು. ಒಂದರ್ಥದಲ್ಲಿ ನರಹರಿ ಸಮಾಜ ಎಂಬ ಗವಿಯ ಒಳಗೆ ಅನಂತ ಧ್ಯಾನದಲ್ಲಿ ಮಗ್ನನಾದ ಯೋಗಿಯಂತೆ ಇದ್ದ. ಅವನಿಗೆ ಮಾತಿನ ಅಗತ್ಯವೇ ಇರಲಿಲ್ಲ. ವಾಸ್ತವದಲ್ಲಿ, ತೀರಾ ಅನಿವಾರ್ಯವಾದ ಬದುಕಿನ ವ್ಯವಹಾರಕ್ಕೆ ತಕ್ಕಷ್ಟು ಅವನು ಮಾತಾಡುತ್ತಿದ್ದ. ಸಂವಾದವೆಂಬುದು ಮಾತ್ರ ಎಂದೂ ಇರಲಿಲ್ಲ. ಅವನಿಗೆ ನಾಲಿಗೆಯಿಲ್ಲವಂತೆ, ಯಾವುದೋ ಆಕ್ಸಿಡೆಂಟಿನಲ್ಲಿ ನಾಲಿಗೆ ತುಂಡಾಗಿ ಹೋಗಿದೆಯಂತೆ ಎಂದು ಹೇಳುತ್ತಿದ್ದ ಕೆಲವರು, ಆತ ಯಾವುದೋ ಅಂಗಡಿಯಲ್ಲಿ ಆಡಿದ ಒಂದೆರಡು ಮಾತುಗಳನ್ನು ಕೇಳಿದ ನಂತರ, ಕಂಡವರೊಡನೆಲ್ಲ, ಅವನಿಗೆ ನಾಲಿಗೆ ಇದೆ ಎಂದು ಘೋಷಿಸುತ್ತಿದ್ದರು. ಅಮೆರಿಕೆಯಲ್ಲಿದ್ದ ನರಹರಿ ಎಷ್ಟು ಸಂಪಾದನೆ ಮಾಡಿದ್ದ ಎಂಬ ಲೆಕ್ಕ ಮಾತ್ರ ಯಾರಿಗೂ ಸಿಗಲಿಲ್ಲ.